# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 02.08.2011**

## ***ಉದ್ಯಾನವನ ನಾಮಕರಣ : ಸಾರ್ವಜನಿಕ ಆಕ್ಷೇಪಣೆಗೆ ಆಹ್ವಾನ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.172ರ ವ್ಯಾಪ್ತಿಯಲ್ಲಿ ಬರುವ ಬಿ.ಟಿ.ಎಂ. ಬಡಾವಣೆ, 1ನೇ ಹಂತ, 16ನೇ ಮುಖ್ಯರಸ್ತೆಯ ಪಕ್ಕದಲ್ಲಿರುವ ಉದ್ಯಾನವನಕ್ಕೆ ***"ಶ್ರೀಮತಿ ವೈಶಾಲಿ ಕಾಸರವಳ್ಳಿ ಉದ್ಯಾನವನ"*** ಎಂದು ನಾಮಕರಣ ಮಾಡಲು ದಿನಾಂಕ: 28.06.2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ನಿರ್ಣಯಿಸಲಾಗಿದೆ.

ಆದುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಆಕ್ಷೇಪಣೆಗಳಿದ್ದಲ್ಲಿ ಈ ಪತ್ರಿಕಾ ಪ್ರಕಟಣೆ ಹೊರಡಿಸಲಾದ ದಿನಾಂಕದಿಂದ 30 ದಿನದೊಳಗೆ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು-02, ಇವರಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ತಿಳಿಸಲಾಗಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** **ದಿನಾಂಕ: 02.08.2011**

## ***ಶೋಭಾ ಡೆವಲಪರ್ಸ್ ರಸ್ತೆ ಒತ್ತುವರಿ ತೆರವಿಗೆ ಮಹಾಪೌರರ ಕಟ್ಟುನಿಟ್ಟಿನ ಆದೇಶ***

ವಾರ್ಡ್ ನಂ.5 ಜಕ್ಕೂರು ಬಡಾವಣೆಯಲ್ಲಿ ಶೋಭಾ ಡೆವಲಪರ್ಸ್ ರವರಿಂದ ಸಾರ್ವಜನಿಕ ರಸ್ತೆ ಒತ್ತುವರಿ ಮಾಡಿಕೊಂಡಿರುವುದನ್ನು ನಿರ್ಧಾಕ್ಷಿಣ್ಯವಾಗಿ ತೆರವುಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ಬಿಟ್ಟುಕೊಡುವಂತೆ ಕ್ರಮ ಕೈಗೊಳ್ಳಲು ನಗರ ಯೋಜನೆ ಮತ್ತು ವಲಯ ಅಧಿಕಾರಿಗಳಿಗೆ ಪೂಜ್ಯ ಮಹಾಪೌರರಾದ ಶ್ರೀಮತಿ ಶಾರದಮ್ಮ ರವರು ಕಟ್ಟುನಿಟ್ಟಿನ ಆದೇಶ ನೀಡಿದರು.

ಮಹಾಪೌರರು ಇಂದು ಜಕ್ಕೂರು, ದೊಡ್ಡಬೊಮ್ಮಸಂದ್ರ, ಕೊಡಿಗೇಹಳ್ಳಿ ವಾರ್ಡ್‌ಗಳಲ್ಲಿ ತಪಾಸಣೆ ಕೈಗೊಂಡ ಸಂದರ್ಭದಲ್ಲಿ ಜಕ್ಕೂರು ಬಡಾವಣೆಯಲ್ಲಿ 300ಕ್ಕೂ ಹೆಚ್ಚು ಸಾರ್ವಜನಿಕರು ಮಹಾಪೌರರಿಗೆ ಮನವಿ ಮಾಡಿ, ಶೋಭಾ ಡೆವಲಪರ್ಸ್ ರವರು ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ. Comprehensive Development Plan ಪ್ರಕಾರ ಇಲ್ಲಿ 50 ಅಡಿ ರಸ್ತೆ ಇದ್ದು, ಅದನ್ನು ಡೆವಲಪರ್ಸ್‌ರಿಂದ ಒತ್ತುವರಿಯಾಗಿದೆ. ಸುಮಾರು 4 ಗುಂಟೆಯಷ್ಟು ರಸ್ತೆ ಒತ್ತುವರಿ ಮಾಡಿ ವಾಹನ ಮತ್ತು ಸಾರ್ವಜನಿಕರಿಗೆ ತೊಂದರೆ ಮಾಡಿದ್ದಾರೆ ಎಂದು ತಿಳಿಸಿದರು. ಸಾರ್ವಜನಿಕರ ಮನವಿಗೆ ಸ್ಪಂಧಿಸಿದ ಮಹಾಪೌರರು ಅಧಿಕಾರಿಗಳಿಗೆ ಸೂಚನೆ ನೀಡಿ, ಒತ್ತುವರಿ ತೆರವುಗೊಳಿಸಲು ಮತ್ತು ಮಂಜೂರಾದ ನಕ್ಷೆಯನ್ನು ನಿಲ್ಲಿಸಲು ಸೂಚಿಸಿದರು.

ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಆರ್. ನಂಜುಂಡಪ್ಪ ರವರು ಮಾತನಾಡಿ, ಶೋಭಾ ಡೆವಲಪರ್ಸ್ ರವರು ಸಾಕಷ್ಟು ಅವ್ಯವಹಾರ ಮಾಡಿದ್ದಾರೆ. ಯಾವುದೇ ಒತ್ತಡಕ್ಕೆ ಮಣಿಯದೆ ಸಾರ್ವಜನಿಕ ಸ್ಥಳವನ್ನು ತೆರವುಗೊಳಿಸಲಾಗುವುದೆಂದು ಇದರಲ್ಲಿ ಯಾವುದೇ ರೀತಿ ವಿಳಂಬ ಮಾಡುವುದಿಲ್ಲವೆಂದು ಸಾರ್ವಜನಿಕರಿಗೆ ಭರವಸೆ ನೀಡಿದರು.

ನಂತರ ಮಹಾಪೌರರಾದ ಶ್ರೀಮತಿ ಶಾರದಮ್ಮ ರವರು ವಾರ್ಡ್ ನಂ.5ರ ಪಾಲೇನಹಳ್ಳಿ ಕೆರೆಗೆ ಭೇಟಿ ನೀಡಿದರು. ಕೆಲವರು ಕೆರೆ ಜಾಗ ಒತ್ತುವರಿ ಮಾಡಿಕೊಂಡು ಶೆಡ್ ನಿರ್ಮಿಸಿರುವುದನ್ನು ಗಮನಿಸಿ ಒತ್ತುವರಿ ತೆರವುಗೊಳಿಸಲು ಮತ್ತು ಪಾಲೇನಹಳ್ಳಿ ಕೆರೆ ಕೋಡಿಬಿದ್ದು, ಮಳೆ ಬಂದಾಗ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುವುದನ್ನು ತಪ್ಪಿಸಲು ಸೇತುವೆ ನಿರ್ಮಿಸಲು ಸೂಚಿಸಿದರು.

ವಾರ್ಡ್ ನಂ.8, ಕೊಡಿಗೇಹಳ್ಳಿ ಬಸ್ ನಿಲ್ದಾಣದಿಂದ ನಾಗಶೆಟ್ಟಿಹಳ್ಳಿ ಮುಖಾಂತರ ಟಾಟಾನಗರಕ್ಕೆ ಸೇರುವ ರಸ್ತೆ ಬಹಳ ಪ್ರಮುಖವಾದ ಮತ್ತು ವಾಹನದಟ್ಟಣೆಯಿಂದ ಕೂಡಿದ ರಸ್ತೆಯಾಗಿದ್ದು, ಸುಗಮ ವಾಹನ ಸಂಚಾರಕ್ಕಾಗಿ ಈ ರಸ್ತೆ ಅಗಲೀಕರಣ ಮಾಡುವುದು ಅವಶ್ಯಕವಾಗಿದೆ. ಕೂಡಲೇ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕೆಂದು ಸಾರ್ವಜನಿಕರು ಮತ್ತು ಪಾಲಿಕೆ ಸದಸ್ಯರಾದ ಶ್ರೀ ಅಶ್ವತ್ಥ್ ನಾರಾಯಣಗೌಡ ರವರು ಮಹಾಪೌರರಲ್ಲಿ ಮನವಿ ಮಾಡಿದರು. ಮಹಾಪೌರರು ರಸ್ತೆ ಉದ್ದಕ್ಕೂ ಸಂಚರಿಸಿ, ಸಾರ್ವಜನಿಕರನ್ನು ಭೇಟಿ ಮಾಡಿ ಅವರ ಅಭಿಪ್ರಾಯವನ್ನು ಸಂಗ್ರಹಿಸಿದರು. ರಸ್ತೆ ಅಗಲೀಕರಣದಲ್ಲಿ ಆಸ್ತಿ ಕಳೆದುಕೊಳ್ಳುವ ಮಾಲೀಕರಿಗೆ ಟಿ.ಡಿ.ಆರ್. ಬಗ್ಗೆ ಹೆಚ್ಚಿನ ತಿಳುವಳಿಕೆ ನೀಡಿ, ರಸ್ತೆ ಅಗಲೀಕರಣ ಕಾಮಗಾರಿ ಕೈಗೆತ್ತಿಕೊಳ್ಳಲು ಸಂಬಂಧಪಟ್ಟ ಅಭಿಯಂತರರಿಗೆ ತಿಳಿಸಿದರು.

ತದನಂತರ ದೊಡ್ಡಬೊಮ್ಮಸಂದ್ರ ವಾರ್ಡ್‌ಗೆ ಭೇಟಿ ನೀಡಿದ ಮಹಾಪೌರರು ವಿಜಯನಗರ ಬಡಾವಣೆಯಲ್ಲಿ ಶೇಕಡ 22.75 ಯೋಜನೆಯ ಅಡಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ನಿರ್ಮಿಸಲಾದ ಮನೆಗಳನ್ನು ಪರಿಶೀಲನೆ ಮಾಡಿದರು. ಕಾಮಗಾರಿಗಳ ಗುಣಮಟ್ಟದ ಬಗ್ಗೆ ಮನೆ ಮಾಲೀಕರಿಂದ ಅಭಿಪ್ರಾಯವನ್ನು ಪಡೆದುಕೊಂಡರು. ಯಲಹಂಕ ವಲಯದಲ್ಲಿ 546 ಮನೆಗಳು ಮಂಜೂರಾತಿಯಾಗಿದ್ದು, ಅದರಲ್ಲಿ 386 ಮನೆಗಳು ಪೂರ್ಣಗೊಂಡಿದ್ದು, ಉಳಿದ ಮನೆಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ನಗರದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಉಪಯೋಗವಾಗುವಂತಹ ಒಳ್ಳೆಯ ಯೋಜನೆಯಾಗಿದ್ದು, ನಗರದ ಎಲ್ಲಾ ವಾರ್ಡ್‌ಗಳಲ್ಲಿ ಮನೆಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ತಪಾಸಣೆ ಸಂದರ್ಭದಲ್ಲಿ ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಆರ್. ನಂಜುಂಡಪ್ಪ, ಪಾಲಿಕೆ ಸದಸ್ಯರಾದ ಶ್ರೀ ಮುನೀಂದ್ರ ಕುಮಾರ್. ಕೆ.ಎ., ಶ್ರೀ ಅಶ್ವತ್ಥ್ ನಾರಾಯಣಗೌಡ, ಶ್ರೀ ಎಂ.ಇ. ಪಿಳ್ಳಪ್ಪ ಹಾಗೂ ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**